

# ಬನ್ರೀ.. ಬಿಜೋಸ್!

ಅಮೆಜಾನ್ ಎಂದರೆ ದಟ್ಟ ಅರಣ್ಯ ಎನ್ನುವುದು ನಮ್ಮ ಬಾಲ್ಯದಲ್ಲಿ ಓದಿಕೊಂಡಿದ್ದ ಪಠ್ಯಮಾಹಿತಿ. ಆದರೆ ಈಗಿನ ಮಕ್ಕಳಿಗೆ ಅಮೆಜಾನ್ ಏನೆಂದು ಕೇಳಿದರೆ ಇವಾಣಿಜ್ಯ ಕಂಪನಿ ಎನ್ನುವ ಉತ್ತರವೇ ಸಿಗುತ್ತದೆ. ಬೆಂಗಳೂರಿನಲ್ಲಂತೂ ಮನೆಯಲ್ಲೇ ಇರುವ ಗೃಹಿಣಿಯರಿಗೂ ಅಮೆಜಾನ್ ಗೊತ್ತು. ಬೇಕೆನ್ನಿಸಿದ್ದನ್ನು ಅವರು ಇಂಟರ್‌ನೆಟ್‌ನಲ್ಲಿ ಖರೀದಿ ಮಾಡಿದರೆ, ಅಮೆಜಾನ್‌ನ ಕೊರಿಯರ್ ಹುಡುಗ ಮನೆಬಾಗಿಲಿಗೇ ತಂದುಕೊಡುತ್ತಾನೆ! ಅಷ್ಟರಮಟ್ಟಿಗೆ ಅಮೆಜಾನ್ ಇವತ್ತು ಜನಪ್ರಿಯ.

ಅಮೆರಿಕದಲ್ಲಿರುವ ಅಮೆಜಾನ್.ಕಾಮ್ ಜಗತ್ತಿನ ಅತಿದೊಡ್ಡ ಇವಾಣಿಜ್ಯ ಕಂಪನಿ. 1994ರಲ್ಲಿ ಅಮೆರಿಕದ ಸೀಟೆಲ್‌ನ ತನ್ನ ಮನೆಯ ಗ್ಯಾರೇಜ್‌ನಲ್ಲಿ ಈ ಕಂಪನಿಯನ್ನು ಆರಂಭಿಸಿದಾತ ಜೆಫ್ರಿ ಪ್ರೆಸ್ಟನ್ ಬಿಜೋಸ್. ಆತ ಈಗ ಜಗತ್ತಿನ ಅತಿದೊಡ್ಡ ಶ್ರೀಮಂತರ ಪಟ್ಟಿಯಲ್ಲಿ 'ಟಾಪ್ ಒನ್!' ಜನವರಿಯ ಮಧ್ಯೆಭಾಗದಲ್ಲಿ ಬಿಜೋಸ್ ಬೆಂಗಳೂರಿಗೆ ಬರಲಿದ್ದಾನೆ. ವಾಸ್ತವವಾಗಿ ಆತ ಎರಡು ದಿನಗಳ ಭೇಟಿಗೆ ಬರುತ್ತಿರುವುದು ಮುಂಬೈಗೆ. ಮುಂಬೈಯಲ್ಲಿ ಪ್ರಮುಖ ಬಾಲಿವುಡ್ ತಾರೆಯರ ಜೊತೆಗೆ ಭೇಟಿ, ಊಟ, ಪಾರ್ಟಿ ವ್ಯವಸ್ಥೆಯಾಗಿದೆ. ಈಗಾಗಲೇ ಖಾನ್–ಕಪೂರ್ ಮುಂತಾದ ಸೂಪರ್ ಸ್ಟಾರ್‌ಗಳಿಗೆ 'ಪುರುಸೊತ್ತು ಮಾಡಿಕೊಳ್ಳಿ' ಎನ್ನುವ ಆಹ್ವಾನವೂ ಹೋಗಿದೆ. ಅಲ್ಲಿಂದ ಬೆಂಗಳೂರಿಗೆ ಒಂದು ಭೇಟಿ. ಬೆಂಗಳೂರಿಗೆ ಏಕೆಂದರೆ, ಅಮೆಜಾನ್.ಕಾಮ್‌ನ ಭಾರತೀಯ ಹೆಡ್ಡಾಫೀಸು ಇರುವುದೇ ಇಲ್ಲಿ. ಬೆಂಗಳೂರಿನ ಟೆಕ್ಕಿಗಳು ಬಿಜೋಸ್ ಆಗಮನವನ್ನು ಕಾತರದಿಂದ ಎದುರು ನೋಡುತ್ತಿದ್ದಾರೆ. ಬಳಿಕ ಪುರುಸೊತ್ತಾದರೆ ದೆಹಲಿಗೂ ಒಂದು ಭೇಟಿ ಇದೆಯಂತೆ.

ಸದ್ಯಕ್ಕೆ ಬಿಜೋಸ್ ಸೈಂಟ್ ಬಾರ್ಟ್ಸ್ ದ್ವೀಪದ ಬೀಚ್‌ಗಳಲ್ಲಿ ಗರ್ಲ್‌ಫ್ರೆಂಡ್ ಲಾರೆನ್ ಸಾಂಚೆಜ್ ಜೊತೆಗೆ ರಜಾಕಾಲವನ್ನು ಸವಿಯುತ್ತಿದ್ದಾನೆ. ಆತ ಎಲ್ಲಿ ಓಡಾಡಿದರೂ ಸುದ್ದಿಯೇ. ಮೊನ್ನೆ ಬೀಚ್‌ನಲ್ಲಿ ಬಿಜೋಸ್ ಧರಿಸಿದ್ದ ಚಪ್ಪಲಿಯ ಫೋಟೊ ಜಾಲತಾಣಗಳಲ್ಲಿ ರಾರಾಜಿಸುತ್ತಿದೆ. ಅದು 500 ಡಾಲರ್ ಮೌಲ್ಯದ 'ಪ್ರಾಡಾ' ಚಪ್ಪಲಿಯಂತೆ.

2010ರಿಂದ 2019ರವರೆಗಿನ ಒಂದು ದಶಕದಲ್ಲಿ, ಷೇರು ಮಾರುಕಟ್ಟೆಯಲ್ಲಿ ಜೋಳಿಗೆ ಭರ್ತಿ ತುಂಬಿಸಿಕೊಂಡ ಅತಿದೊಡ್ಡ ಶ್ರೀಮಂತರಲ್ಲಿ ಜೆಫ್ ಬಿಜೋಸ್ ಮುಂಚೂಣಿಯಲ್ಲಿದ್ದಾನೆ. ಕಳೆದ ಹತ್ತು ವರ್ಷಗಳಲ್ಲಿ ಆತನ ನಿವ್ವಳ ಆಸ್ತಿ ಮೌಲ್ಯ 97.4 ಶತಕೋಟಿ ಡಾಲರ್‌ನಷ್ಟು ಏರಿಕೆಯಾಗಿದೆ. ಈಗ ಆತನ ಒಟ್ಟು ಆಸ್ತಿ ಮೌಲ್ಯ 109.7 ಶತಕೋಟಿ ಡಾಲರ್. 2010ರಲ್ಲಿ ಈತನ ಆಸ್ತಿ 12.3 ಶತಕೋಟಿ ಡಾಲರ್ ಆಗಿತ್ತು. ಆಗ ವಿಶ್ವದ ಅತಿದೊಡ್ಡ ಶ್ರೀಮಂತರ ಪಟ್ಟಿಯಲ್ಲಿ ಜೆಫ್ ಬಿಸೋಸ್‌ನ ಹೆಸರು 43ನೇ ಸ್ಥಾನದಲ್ಲಿತ್ತು. 43ನೇ ಸ್ಥಾನದಿಂದ ನಂಬರ್ ಒನ್ ಪಟ್ಟಕ್ಕೆ ಈ ಪ್ರಯಾಣ ಸುಲಭದ್ದೇನೂ ಆಗಿರಲಿಲ್ಲ. ಅಂದರೆ 'ಈ ದಶಕ ಜೆಫ್ ಬಿಜೋಸ್‌ನದ್ದು' ಎನ್ನಲಡ್ಡಿಯಿಲ್ಲ. ವಿಶ್ವದ ದುಬಾರಿ ಲಕ್ಸುರಿ ವಸ್ತುಗಳ ಅತಿದೊಡ್ಡ ಉತ್ಪಾದನಾ ಕಂಪನಿಗಳನ್ನು ಹೊಂದಿರುವ ಫ್ರಾನ್ಸ್‌ನ ಬರ್ನಾಲ್ಡ್ ಅರ್ನಾಲ್ಟ್ 107.9 ಶತಕೋಟಿ ಡಾಲರ್‌ನೊಂದಿಗೆ ಎರಡನೇ ಸ್ಥಾನದಲ್ಲಿದ್ದರೆ, ಮೈಕ್ರೊಸಾಫ್ಟ್‌ನ ಧಣಿ ಬಿಲ್ ಗೇಟ್ಸ್‌ಗೆ 107.6 ಶತಕೋಟಿ ಡಾಲರ್‌ನೊಂದಿಗೆ ಮೂರನೇ ಸ್ಥಾನ.

2019ರ ಕೊನೆಯಲ್ಲಿ ಬಿಜೋಸ್ ಆಸ್ತಿಯ ಒಟ್ಟು ಮೊತ್ತ ಇನ್ನಷ್ಟು ಹೆಚ್ಚಿರುತ್ತಿತ್ತು. ಜುಲೈ ತಿಂಗಳಲ್ಲಿ ಪತ್ನಿ ಮೆಕೆಂಜೀಗೆ ಡೈವೋರ್ಸ್ ಕೊಟ್ಟ ಬಿಜೋಸ್ ಕೋಟ್ಯಂತರ ಡಾಲರ್ ಕಳೆದುಕೊಂಡ. ಆತ ಪತ್ನಿಗೆ ಡೈವೋರ್ಸ್ ಜೊತೆಗೆ ಕೊಟ್ಟ ಪರಿಹಾರ ಮೊತ್ತ 3000 ಕೋಟಿ ಡಾಲರ್‌ಗೂ ಹೆಚ್ಚು! ಅಮೆಜಾನ್.ಕಾಮ್‌ನಲ್ಲಿ ಶೇ.12ರಷ್ಟು ಷೇರು ಬಂಡವಾಳ ಹೊಂದಿರುವ ಬಿಜೋಸ್, ತನ್ನ ಪಾಲಿನ ಷೇರುಗಳಲ್ಲಿ ಶೇ 4ರಷ್ಟು ಷೇರುಗಳನ್ನೂ ಪತ್ನಿಗೆ ಕೊಟ್ಟಿದ್ದಾನೆ. 25 ವರ್ಷಗಳಿಂದ ಸುಖವಾಗಿದ್ದ ಈ ದಂಪತಿ, ಬೇರೆಯಾಗಲು ಕಾರಣ ಗರ್ಲ್‌ಫ್ರೆಂಡ್ ಲಾರೆನ್ ಸಾಂಚೆಜ್‌ನ ಜೊತೆಗಿನ ಬಿಜೋಸ್ ಒಡನಾಟ. ಕಾದಂಬರಿಕಾರ್ತಿಯೂ ಆಗಿರುವ ಮೆಕೆಂಜೀ ಡೈವೋರ್ಸ್ ಬಳಿಕ ಜಗತ್ತಿನ ಅತ್ಯಂತ ಶ್ರೀಮಂತ ಉದ್ಯಮಿಯಾಗಿದ್ದಾಳೆ. ಆಕೆಯ ಆಸ್ತಿ ಮೊತ್ತ 3530 ಕೋಟಿ ಅಮೆರಿಕನ್ ಡಾಲರ್.

ಅಮೆಜಾನ್‌ನ ಸಿಇಓ ಮತ್ತು ಅಧ್ಯಕ್ಷನಾಗಿರುವ ಬಿಜೋಸ್, ಇ–ಕಾಮರ್ಸ್ ಮಾತ್ರವಲ್ಲ, ಏರೋಸ್ಪೇಸ್ ಉದ್ಯಮದಲ್ಲೂ ಹಣ ಹೂಡಿದ್ದಾನೆ. ವಾಣಿಜ್ಯ ಬಳಕೆಗೆ ರಾಕೆಟ್ ತಯಾರಿಸುವ ಈತನ ಕಂಪನಿ ಬ್ಲೂ ಒರಿಜಿನ್, ದೊಡ್ಡ ಮಟ್ಟದಲ್ಲಿ ಸುದ್ದಿ ಮಾಡುತ್ತಿದೆ. ಜೊತೆಗೆ ಅಮೆರಿಕದ ಪ್ರತಿಷ್ಠಿತ ಮಾಧ್ಯಮ ಸಂಸ್ಥೆ 'ವಾಷಿಂಗ್ಟನ್ ಪೋಸ್ಟ್' ಒಡೆಯನೂ ಹೌದು.

ಬಿಜೋಸ್ ಹುಟ್ಟಿದ್ದು 1964ರ ಜನವರಿ 12ರಂದು. ಅಂದರೆ ಜನವರಿ 12ಕ್ಕೆ ಸರಿಯಾಗಿ 56 ವರ್ಷ. ಐಟಿ ರಾಜಧಾನಿ ಬೆಂಗಳೂರಿಗೆ ಬಂದಾಗ ಈತ ಭಾರತದಲ್ಲಿ ಹೊಸ ಹೂಡಿಕೆಯ ಬಗ್ಗೆ ಏನಾದರೂ ಹೇಳಬಹುದೆ ಎನ್ನುವ ಕುತೂಹಲ ಉದ್ಯಮ ವಲಯದಲ್ಲಿದೆ. ಬಾಲಿವುಡ್‌ನಲ್ಲಿ ತಾರೆಯರ ಜೊತೆಗೆ ಪಾರ್ಟಿ ಮಾಡುತ್ತಾ ಮತ್ತೇನು ಮಾತನಾಡಬಹುದು ಎನ್ನುವುದೂ ಗೊತ್ತಿಲ್ಲ. ಯಾವುದಕ್ಕೂ.. ಬನ್ರೀ ಬಿಜೋಸ್!

■ **ಹನಿ**

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial: 45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65